ವಿ. ಹಮೀದ್, ವಿಟ್ಲ
ಇಲ್ಲೊಬ್ಬಾಕೆ ನನ್ನನ್ನು ಕಂಡಾಕ್ಷಣ ನಗುತ್ತಾಳೆ, ಐ ಲವ್ ಯೂ ಎನ್ನಲೇ?



ಸುಮ್ಮನಿರಿ ಸಾರ್! ಚಿಂಪಾಂಜಿಯನ್ನು ಕಂಡು ಎಷ್ಟೋ ಜನ ನಗುತ್ತಾರೆ; ಅದೇನು ಎಲ್ಲರಿಗೂ ಐ ಲವ್ ಯೂ ಅನ್ನುತ್ತದೆಯೇ?

ಬಿ. ಆರ್. ರಂಜನಾ, ಹಾಸನ
ಯಂತ್ರಗಳಿಂದ ಕೆಲಸ ಮಾಡಿಸಿಕೊಂಡು ಬೊಜ್ಜು ಕರಗಿಸಲು ಸರ್ಕಸ್ ಮಾಡುತ್ತಾರಲ್ಲಾ ...?
ಬೊಜ್ಜು ಬೆಳೆದರೆ ಸೊರಗು ಸುಖ ಅಂತೆ!

ಜಗದೀಶ ಎಂ.ಎನ್, ನಗರ
ಈಗಿನ ಕಾಂಗ್ರೆಸಿಗರು ಟೊಪ್ಪಿ ಧರಿಸುವುದೇ ಇಲ್ಲವಲ್ಲಾ...?
ಎಲ್ಲರಿಗೂ ಹಾಕಿದ್ದರಿಂದ ಸ್ಟಾಕ್ ಖಾಲಿ ಆಗಿದೆಯಂತೆ!

ವಿದ್ಯಾ ಎನ್. ಪೈ, ಹೊನ್ನಾವರ
ದೇವರು ಪ್ರಾಣಿಗಳನ್ನೇಕೆ ಮೂಕವಾಗಿ ಸೃಷ್ಟಿಸಿದ?
ಎಲ್ಲಾ ಪ್ರಾಣಿಗಳೂ ಸೇರಿ ತವ ಸುಪ್ರಭಾತಂ ಎಂದರೆ ಕಿವಿ, ತಲೆ ಎಲ್ಲಾ ಹಾಳಾದೀತೆಂಬ ಭಯದಿಂದ!

ಶಿರಾಲಿ ದೀಪಕ್ ಆರ್. ಶೇಟ್, ಬೆಂಗಳೂರು
ರಾಜಕೀಯದಲ್ಲಿ ಸ್ನೇಹಕ್ಕೆ ಬೆಲೆ ಇಲ್ಲವೆ?



ಇದೆಯಲ್ಲಾ... ಕೋಟಿಗಟ್ಟಲೆ, ಸೂಟ್‌ಕೇಸ್‌ಗಟ್ಟಲೆ!

ಎನ್. ಆರ್. ದೇಸಾಯಿ, ರಾಯಚೂರು
ನೈಸ್ ವಿರುದ್ಧ ಗೌಡರೇಕೆ ರಫ್ ಆಗಿದ್ದಾರೆ?
ಬ್ಲಫ್ ಮಾಡಿದರೆ ಸ್ಟಫ್ ಸಿಗಬಹುದೆಂದು!

ಮೊಳಕಾಲ್ಮೂರು ಸುರೇಶ್, ಬಳ್ಳಾರಿ
ಮದುವೆ ಎಂಬ ಸಂತೆಯಲ್ಲಿ ಮಾರಾಟವಾಗುವುದು ಯಾವುದು?
ಕನ್ಯಾಪಿತೃವಿನ ನೆಮ್ಮದಿ!

ನೆ.ಸು. ಆನಂದ್, ಕತ್ತರಗುಪ್ಪ
ಈಗಿನ ಪುರೋಹಿತರು ಜುಟ್ಟು ಕಟ್ ಮಾಡಿಸಿ ಕ್ರಾಪ್‌ಕಟ್ ಬಿಡುತ್ತಾರಲ್ಲಾ, ಏಕಿರಬಹುದು ಸಾರ್?
ಹೆಂಡತಿಯ ಕೈಗೆ ಜುಟ್ಟು ಸಿಗದಿರಲೆಂದು.

ವಿಜಯಲಕ್ಷ್ಮಿ ಗೋಪಾಲ್, ಬೆಂಗಳೂರು
ವಿನಿವಿಂಕ್ ಶಾಸ್ತ್ರಿಗಳ ಬಳಿ ಇಟ್ಟ ಹಣ ಮರಳಿ ಪಡೆಯಬಹುದು, ನಿಮಗೆ ಕಳುಹಿಸಿದ ಪ್ರಶ್ನೆಗೆ ಉತ್ತರ ದೊರಕದಲ್ಲಾ...?
win ತಿಟಿ ಆಗುವ ಪ್ರಶ್ನೆ ಕಳುಹಿಸಿ, winkಗಿಂತಲೂ ಮುಂಚೆ ಶಾಸ್ತ್ರೋಕ್ತವಾಗಿ ಉತ್ತರಿಸುತ್ತೇನೆ !

ಹರಿಪ್ರಸಾದ್ ಶಂಭೂರು, ಬಂಟ್ವಾಳ
ಕರ್ನಾಟಕದ ವಿಧಾನಸಭೆಯ ಸದಸ್ಯರನ್ನು ಮುಂದಿನ ಒಲಿಂಪಿಕ್‌ಗೆ ಕಳುಹಿಸಿದರೆ ಬಾಕ್ಸಿಂಗ್‌ನಲ್ಲಿ ಚಿನ್ನದ ಪದಕ ತರಬಹುದಾ?
ಊಹೂಂ, ತರುವುದಿಲ್ಲ; ಹಾಗೆಯೇ ಸ್ವಿಸ್ ಬ್ಯಾಂಕ್‌ನಲ್ಲಿ ಡಿಪಾಸಿಟ್ ಮಾಡಿಬಿಡುತ್ತಾರೆ.

ಮಲ್ಲಿಕಾರ್ಜುನ ಹ. ಬಗಲಿ, ಸಾಂಗಲಿ
ಈ ಭೂಮಿಯ ಮೇಲೆ ಸುಖ ಸಂತೋಷದಿಂದ ನಗುವು ಮಾರ್ದನಿಸುವ ಕಾಲ ಯಾವಾಗ ಬರುತ್ತೆ?
ಮೈಸೂರಿನ ಪ್ರೊಫೆಸರ್ ಕೃಷ್ಣೇಗೌಡರು ಹಾಸ್ಯಭಾಷಣ ಮಾಡಿದಾಗಲೆಲ್ಲಾ!

ನರಸಿಂಹ ಎಂ. ಪೈ, ಕಾಸರಗೋಡ
ಕ್ಷೀರಪಾನಿಗಳಿಗಿಂತ ಮದ್ಯಪಾನಿಗಳೇ ಹೆಚ್ಚಾಗಲು ಕಾರಣವೇನು?
ದನಕ್ಕಿಂತಲೂ ಧನ ಹೆಚ್ಚಿರುವುದರಿಂದ!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಚಕ್ರವ್ಯೂಹದಲ್ಲಿ ಸಿಕ್ಕ ಅಭಿಮನ್ಯುವಿಗೂ, ರಾಜಕೀಯ ಚಕ್ರವ್ಯೂಹದಲ್ಲಿ ಸಿಕ್ಕ ಯಡ್ಡಿಗೂ ಏನು ವ್ಯತ್ಯಾಸ?
ಅವನದು ಶೌರ್ಯ, ಇವರದು ಚೌರ್ಯ!

ಪವಿತ್ರ ಕೆ. ಪ್ರಭುಲಿಂಗಪ್ಪ, ವಳಬಳ್ಳಾರಿ
ಸ್ವಾಮಿ, ಈ ಜಗತ್ತಿನಲ್ಲಿ ಒಳ್ಳೆಯದು ಮತ್ತು ಕೆಟ್ಟದಾವುದು ದಯವಿಟ್ಟು ತಿಳಿಸುವಿರಾ?
ಬಹಳ ಸುಲಭ! ಕೆಟ್ಟದ್ದಲ್ಲವಾದುದೆಲ್ಲವೂ ಒಳ್ಳೆಯದು, ಒಳ್ಳೆಯದಲ್ಲವಾದುದೆಲ್ಲವೂ ಕೆಟ್ಟದ್ದು!

ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ
ಹೆಣ್ಣನ್ನು ಮಾಯಾಜಿಂಕೆಗೆ ಹೋಲಿಸಿದರೆ ಗಂಡನ್ನು ಯಾವುದಕ್ಕೆ ಹೋಲಿಸಬಹುದು ಗುರೂಜಿ?
ಅದನ್ನು ಚುಚ್ಚಿದ ಬಾಣಕ್ಕೆ ಎಂದಿತೊಂದು ಮಹಿಳಾ ಪಡೆ.

ಮಹಾವೀರ ಕಾಸಾರ, ಚನ್ನಗಿರಿ
ಕವಿಗೂ, ಕಪಿಗೂ ಏನು ವ್ಯತ್ಯಾಸ?
ಕಪಿಗೆ ಬೇಕು ವನ, ಕವಿಗೆ ಕವನ!

## ಬಹುಮಾನಿತ ಪ್ರಶ್ನೆ

ಜಿ.ಆರ್. ಆದಿನಾರಾಯಣಮುನಿ, ಬೆಂಗಳೂರು
ವಾಮಾಚಾರ ವಿಧಾನಸೌಧದ ಬಾಗಿಲಿಗೂ ಬರುವಂತಾಯಿತಲ್ಲಾ...?
ಇನ್ನು ಮುಂದೆ ಮಲೆಯಾಳಿ ಮಾಂತ್ರಿಕರು ಮಂತ್ರಿಗಳ ಪಿ.ಎ. ಆಗುವರಂತೆ! ಆಗ ಅಶೋಕಸ್ತಂಭಕ್ಕೂ ಒಂದು ತಾಯಿತ!

ಎನ್. ಎ. ರಾಘವೇಂದ್ರ, ಬೆಂಗಳೂರು
ಪಗಾರ ನೀಡಿದ ದಿನ ಸತಿ ತೋರುವ ಪ್ರೀತಿ ಮರುದಿನವೇ ಕಾಣೆಯಾಗಲು ಕಾರಣವೇನು?
ಮರುದಿನವೇ ಪಗಾರವೂ ಖಾಲಿಯಾಗುತ್ತದಲ್ಲ!

ಗೀತಾ ಎಸ್. ಕೆ, ಹಾಸನ
ಒಂದು ಕೆಲಸ, ಗಂಡ ಮಾಡಿದರೆ ಸರಿ, ಹೆಂಡತಿ ಮಾಡಿದರೆ ತಪ್ಪು; ಯಾವುದು?



ಮುಖಕ್ಷೌರ!

ಅದು ಇಲ್ಲದೆ ಇದು ಇಲ್ಲ!
ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
ಹೆಂಡತಿ, ಪತ್ನಿ, ಮತ್ತು ಧರ್ಮಪತ್ನಿಗಳ ವ್ಯತ್ಯಾಸವೇನು?
ಹೆಂಡದ ನಶೆ ಏರಿಸುವವಳು ಹೆಂಡತಿ, ಪತಿಯ ಮಾತಿಗೆ ನಕಾರದ ಒತ್ತು ನೀಡುವವಳು ಪತ್ನಿ, ವರದಕ್ಷಿಣೆಯಿಲ್ಲದೆ ಬಿಟ್ಟಿ ಮದುವೆಯಾದವಳು ಧರ್ಮ ಪತ್ನಿ!

ಹೆಚ್. ಆರ್. ಕಡಿವಾಲ, ಬಾದಾಮಿ
ಲಂಚ ತೆಗೆದುಕೊಳ್ಳುವುದು ನಿಲ್ಲುವುದು ಯಾವಾಗ?
ನಿಂತಿದೆಯಲ್ಲಾ! ಭದ್ರಬುನಾದಿಯ ಮೇಲೆ ಸ್ಥಿರವಾಗಿ ನಿಂತಿದೆ!

ಎಚ್.ಎನ್. ನಟರಾಜು, ಬೆಂಗಳೂರು
ಲಕ್ಷ್ಮಿಯೂ, ಸರಸ್ವತಿಯೂ ಒಂದೆಡೆ ಸೇರೋಲ್ಲವಲ್ಲಾ, ಯಾಕೆ?
ಅದೆಲ್ಲಾ ಅಂದಿನ ಮಾತು. ಇಂದು ಸ್ಕೂಲ್ ಆರಂಭಿಸಿದರೆ ವಿದ್ಯೆಯೊಂದಿಗೆ ಡೊನೇಷನ್ ಲಕ್ಷ್ಮಿ ಥಟ್ಟನೆ ಹಾಜರ್!

■ ರಾಮ್